Doc-488
T-P.2

Reg No B C 186 1 — 6 — 72

55th Year of Publication ‘Satyavadi’ daily, Mysore 4

In the State — The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ನವೀನ ನಿಲ್ದಾಣಕ್ಕೆ ಒತ್ತಾಯ

ಪ್ರಧಾನಿಯ ಪ್ರವಾಸ

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಜೂನ್ 13 ರಿಂದ 4 ದಿವಸಗಳ ವರಿಗೆ ಸ್ವೀಡನ್ ಪ್ರವಾಸವನ್ನು ಕೈಗೊಳ್ಳುವರು ಸ್ಟಾಕ್‌ಹೋಂನಲ್ಲಿ ಮಾನವೀಯ ವಾತಾವರಣ ವಿಚಾರದಲ್ಲಿ ವಿಶ್ವಸಂಸ್ಥೆ ಸಮ್ಮೇಳನದ ವಿಶೇಷ ಅಧಿವೇಶನದಲ್ಲಿ ಭಾಷಣ ಮಾಡುವರು.

ಮೈಸೂರು ಡಿ. ಸುಬ್ಬಯ್ಯಾ ರಸ್ತೆಯಲಿರುವ ಡಾ|| ಬಿ. ಜಿ. ದಾಸ್‌ರವರ ಹೊಸ ಫೋನ್ ನಂ 23142

ಭಾಗವಹಿಸುವುದಿಲ್ಲವೇ ?

ಬಾಂಗ್ಲಾ ದೇಶಕ್ಕೆ ಮುನ್ನಡೆ ಕಾಯದೇ ಮುಜಿಬರ್ ರೆಹಮಾನರು ಶೃಂಗಸಭೆಯಲ್ಲಿ ಭಾಗವಹಿಸದಿದ್ದರೆ, ಪಾಕೇಸ್ತಾನ ಸಭೆಯನ್ನು ಬಹಿಷ್ಕರಿಸಬಹುದೆಂದು, ಭುಟ್ಟೋರವರು ಭಾಗವಹಿಸಲಾರರೆಂದು ಪಾಕೇಸ್ತಾನವರ ಅಭಿಪ್ರಾಯವಾಗಿದೆಯೆಂದು ಇಸ್ಲಾಮಾಬಾದಿನಿಂದ ವಾಷಿಂಗ್ಟನ್‌ಗೆ ವರದಿಯಾಗಿದೆ.

ಗುಲ್ಬರ್ಗದಲ್ಲಿ ವಿಶ್ವವಿದ್ಯಾನಿಲಯ

ರಾಜ್ಯದ ಸರ್ವ ಭಾಗಗಳು ಒಂದೇರೀತಿ ಪ್ರಗತಿ ಆಗಬೇಂಬ ದೃಷ್ಟಿಯಿಂದ ನೂತನ ವಿಶ್ವವಿದ್ಯಾನಿಲಯವು ಗುಲ್ಬರ್ಗಾದಲ್ಲಿ ಸಂಸ್ಥಾಪನೆ ಆಗಬೇಕೆಂದು ಲೋಕಸಭೆ ಹಿಂದಿನ ಸದಸ್ಯ ಶ್ರೀ ಮಹಾದೇವಪ್ಪ ಬೆಂಗಳೂರಿನಲ್ಲಿ ತಿಳಿಸಿದರು.

★

ಮಂತ್ರಿಗಳಿಗೆ ಒತ್ತಾಯ

ಬೆಂಗಳೂರಿನಲ್ಲಿ ಪ್ರವಾಸಿ ಸಂಚಾರ ಹೆಚ್ಚಲು ನವೀನ ನಿಲ್ದಾಣ ನಿರ್ಮಿಸಬೇಕೆಂದು ಪಾರ್ಲಿಮೆಂಟಿನ 24 ಮಂದಿ ಸದಸ್ಯರು ಪ್ರವಾಸ ಮಂತ್ರಿ ಶ್ರೀ ಕರಣಸಿಂಗ್‌ರನ್ನು ಒತ್ತಾಯ ಮಾಡಿರುವರು.

★

ಬಾಂಗ್ಲಾ ತೆರಿಗೆ

ಈಗ ಕಂಡುಬಂದಿರುವಂತೆ ಬಾಂಗ್ಲಾ ನಿರಾಶ್ರಿತರ ತೆರಿಗೆ 72–73 ನೇ ಸಾಲಿನ ಕಡೆಯ ವರೆಗೆ ಮುಂದುವರಿಯುವದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ವಿಶೇಷ ಕೋರ್ಟು ನೇಮಕ

ಕೋಮುವಾರು ಗಲಭೆ ಸಂಬಂಧನ ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯದ ನೇಮಕ ಮಾಡುವ ಮಸೂದೆ ಲೋಕಸಭೆಯಲ್ಲಿ ಮಂಡಿತವಾಗಿದೆ.

★

ಪ್ರಾಮಾಣಿಕ ವಿದ್ಯಾರ್ಥಿ

ಬೆಂಗಳೂರು ನೇತಾಜಿ ರಸ್ತೆಯಲ್ಲಿ ಸಿಕ್ಕಿದ ಸಾವಿರ ರೂಪಾಯಿಗಳ ಬೆಲೆಯ ಚಿನ್ನದ ಸರವನ್ನು ಮೊನ್ನೆ ಬಿಷಪ್ ಕಾಟ್ಸ್ ಕಾಲೇಜ್ ವಿದ್ಯಾರ್ಥಿ ಶ್ರೀ ಸಿ. ಬಾಲಸುಬ್ರಹ್ಮಣ್ಯ ಪ್ರಾಮಾಣಿಕತೆಯಿಂದ ತಂದುಕೊಟ್ಟಿದ್ದಕ್ಕೆ ಪೋಲೀಸು ಕಮೀಷನರ್ ರೂ 100 ಬಹುಮಾನ ನೀಡಿದರು.

ಪುರಸಭೆ

ಮೈಸೂರು ಪುರಸಭೆಯ ಅಧ್ಯಕ್ಷರಾದ ಶ್ರೀ ಸೋಮಸುಂದರಂರವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಪುರಸಭೆಯ ಅಧಿವೇಶನದಲ್ಲಿ, ಶ್ರೀ ಟಿ ಎ ಶ್ರೀನಿವಾಸರಾವ್ ರವರು ಮಾತನಾಡುತ್ತಾ, ಹೊಟೇಲಿನವರು ಆಟೋ ರಿಕ್ಷಾದವರು ಪ್ರವಾಸಿಗರನ್ನು ಶೋಷಣೆ ಮಾಡುತ್ತಿರುವರೆಂದು, ಸಂಬಂಧಿಸಿದ ಅಧಿಕಾರಿಗಳು ಈ ಬಗೆಗೆ ಕಣ್ಣು ಮುಚ್ಚಿಕೊಂಡಿರುವರೆಂದು ಆಪಾದಿಸಿದರು ಪ್ರವಾಸಿಗರಿಗೆ ಮಾರಲಾಗುವ ಅರಮನೆಯ ಅಸ್ಸಿ ಪ್ರಮುಖ ಭಾರಿ ವಸ್ತುಗಳು ಆಗಿರುವುದರಿಂದ ಸರ್ಕಾರ ಅಥವಾ ಪೌರಸಭೆ ಕೊಂಡುಕೊಳ್ಳಬೇಕೆಂದು ಶ್ರೀ ವೇದಾಂತ ಹೆಬ್ಬಿಗೆ ನುಡಿದರು.

○

ಕೊಂಡಾರಿಗೆ ಪಾರಿತೋಷಕ

1970 ರ ನೆಹರು ಪಾರಿತೋಷಕವು ಜಾಂಬಿಯಾ ಅಧ್ಯಕ್ಷ ಡಾ|| ಕೆನೆತ್‌ಕೊಂಡಾರಿಗೆ ಕೊಡಲಾಗುವುದು.

●

ಚಿನ್ನದ ಬೆಲೆ ಏರಿಕೆ

ಚಿನ್ನದ ಬೆಲೆ ಏರಿದೆ ಎಂದು ಜೊಂಬಾಯಿನಿಂದ ವಾರ್ತೆ ಬಂದಿದೆ ಸ್ಟಾಂಡರ್ಡ್ ಚಿನ್ನ ಹತ್ತು ಗ್ರಾಂಗೆ ರೂ 236 ಸವರ್ರಗೆ ರೂ. 191.

ಅತಿವೃಷ್ಟಿ

ಈ ವರ್ಷ ಭಾರತದಲ್ಲಿ ಆದ ಅತಿ ವೃಷ್ಟಿಯಿಂದ 50 ಮಿಲಿಯ ಜನರು ಸಂಕಷ್ಟಕ್ಕೆ ತುತ್ತಾಗಿರುವರೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

★

ಭಾರಿ ಅಗ್ನಿ ಅನಾಹುತ

ಕಟಕ್ ಹತ್ತಿರದ ಸುನಾಮುಹಿಗ್ರಾಮದಲ್ಲಿ ಆದ ಅಗ್ನಿ ಅನಾಹುತದಲ್ಲಿ 7 ಮಂದಿ ಸತ್ತರು ಸಾವಿರ ಸಂಸಾರಗಳು ನಿರ್ಗತಿಕರಾದರು 500 ದನಗಳು ಸತ್ತವು.

★

ಬಂಧನ

ಬೆಂಗಳೂರಿನಲ್ಲಿ ಕೃತಕ ಸಿಂಡಿಕೇಟ್ ಲಾಟರಿ ಟಿಕೇಟು ಪ್ರಿಂಟು ಮಾಡಿ ಮಾರುತ್ತಿದ್ದ ಮೂವತ್ತನಾಲು ವರ್ಷದ ಓರ್ವ ಸಬ್ ಏಜೆಂಟ್‌ನನ್ನು ಪೋಲೀಸರು ಬಂಧಿಸಿದ್ದಾರೆ.

★

ನಿಲ್ಲಿಸುವ ಯೋಚನೆ ಇಲ್ಲ

ರಾಷ್ಟ್ರಗೀತೆಯನ್ನು ಸಿನಿಮಾಗಳಲ್ಲಿ ಹಾಡುತ್ತಿರುವುದನ್ನು ನಿಲ್ಲಿಸುವ ಯೋಚನೆ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ರೈತ ಮತ್ತು ಕಾರ್ಮಿಕ ಸೇವಾ ಸಂಘ

ಸಂಘದ ಅಧ್ಯಕ್ಷರಾದ ಶ್ರೀ ಕೆ ಪಿ ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾ ಸಂಘದ ಸಭೆ ಕೂಲಂಕುಶವಾಗಿ ಪರಿಶೀಲಿಸಿ, ಶಾಂತಿ, ನೆಮ್ಮದಿ ಮತ್ತು ದೇಶದ ಹಿತದೃಷ್ಟಿಯಿಂದ ಭೂಸುಧಾರಣೆ, ನಗರ ಆಸ್ತಿ ವಿತರಣೆ ಮತ್ತು ಒಬ್ಬನಿಗೆ ಒಂದೇ ಕೆಲಸ ಎಂಬುದನ್ನು ಕೈಬಿಡುವಂತೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯಪಡಿಸಿದೆ ಮುಂದಿನ ಸಾಲಿನ ಅಧಿಕಾರ ವರ್ಗ — ಶ್ರೀಗಳಾದ ಕೆ ಪಿ ಜಂಬೂಗೌಡ (ಅಧ್ಯಕ್ಷ) ಎಂ ಕೆ ಮುಕುಂದರಾವ್ (ಕಾರ್ಯದರ್ಶಿ) ಕೆ ಎಸ್ ಸಿದ್ದಪ್ಪ, ಕೆ ಎಂ ವೆಂಕಟ ಚಲಯ್ಯ, ಕೆ ಆರ್ ಶಂಕರ್, ಎಂ ಪಿ ತಮ್ಮಣ್ಣ, ಕೆ ಎಸ್ ತಿಮ್ಮೇಗೌಡ. ಎಂ ಸಾಬೂಲಾಲ್, ಎಂ ಪುಟ್ಟಸ್ವಾಮಿ, ಡಾ|| ಎಂ ಎನ್ ಪಂಡಿತ್, ಕೆ ಎಸ್ ಅಜೀಜ್ ಮತ್ತು ಕೊಡಗಳ್ಳಿ ಜೈ ಭಾರತ್ ರೈಸ್ ಮಿಲ್ಸ್ ಮಾಲೀಕರಾದ ಕೆ ಪಿ ಪುಟ್ಟಸ್ವಾಮಿ (ಕಾರ್ಯಕಾರಿ ಸಮಿತಿ ಸದಸ್ಯರು)

ವಿದ್ಯಾರ್ಥಿಗಳ ಔಷಧಿ ಸೇವನೆ

ಸಾಮಾನ್ಯವಾಗಿ ಜರ್ಮನಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಔಷಧಿ ಉಪಯೋಗಿಸುವ ಅಭ್ಯಾಸವಿಡೆ. ಮೆಡಿಕಲ್ ವಿದ್ಯಾರ್ಥಿಗಳು ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳೂ ಹೆಚ್ಚು ಉಪಯೋಗಿಸುತ್ತಿದ್ದಾರೆಂದು ಜರ್ಮನಿಯ ನರಗಳ ರೋಗ ವಿಭಾಗದ ಮೂವರು ಡಾಕ್ಟರುಗಳ ಪರಿಶೀಲನೆಯಿಂದ ವ್ಯಕ್ತಪಟ್ಟಿದೆ.

★

ವಿಶ್ವವಿದ್ಯಾನಿಲಯಗಳಲ್ಲಿ ಗಲಭೆಗಳಿಲ್ಲ

ಬರ್ನ್ (ಡಾಡ್)— ಜರ್ಮನಿಯು ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚು ಗಲಭೆಗಳುಗಿಲ್ಲವೆಂಬುದು ಜರ್ಮನ್ ವಿದ್ಯಾ ಮತ್ತು ವಿಜ್ಞಾನ ಮಂತ್ರಿ ವಿಭಾಗದ ವಾರ್ತಾ ವಿಭಾಗದಿಂದ ತಿಳಿದುಬಂದಿದೆ.

★

ದಿವ್ಯವಾಣಿ

ಕಾನೂನು ಕೊನೆಯದಾದಲ್ಲಿ ದಬ್ಬಾಳಿಕೆ ಆರಂಭವಾಗುತ್ತದೆ. — ವಿಲಿಯಂ ಪಿಟ್.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ.
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆನೆ - ಹುಡುಗ

ವುಡ್‌ಲ್ಯಾಂಡ್ 2-6-72ರಿಂದ ಅಪೋಲೊ 5ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಟು ಸರ್ ವಿತ್ ಲೌ

ಅಪೂರ್ವ 26 5 72 ರಿಂದ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜರೂರತ್

ಪಾತ್ರ– ರಿನ ರಾಯ್, ವಿಜಯು ಆರೋರ, ಆಸಿತ್ ಸೇನ್, ಮನಮೋಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

Protect the Cow

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4